

ಸಂಪಾದಕೀಯ

# ಹೊಸ ಆಯಾಮದತ್ತ ..

ಕೆಲವೊಮ್ಮೆ ಹೀಗಾಗುವುದುಂಟು: ಬದುಕಿನಲ್ಲಿ ಅನಿರೀಕ್ಷಿತವಾಗಿ ಹೊಸ ಪ್ರಪಂಚವೊಂದು ತೆರೆದಂತಾಗುತ್ತದೆ. ಇದು ಯಾವುದೋ ಘಟನೆಗೆ ಸಂಬಂಧಪಟ್ಟಂತೆ ಇರಬಹುದು; ವಸ್ತು – ವಿಷಯ–ವ್ಯಕ್ತಿಗಳಿಗೆ ಸಂಬಂಧಿಸಿರಬಹುದು. ಇದುವರೆಗೆ ನಾವು ತಿಳಿದದ್ದೆಲ್ಲಾ ತಪ್ಪು, ಈ ವ್ಯಕ್ತಿ ಅಥವಾ ವಿಷಯ ಹೀಗಲ್ಲವೇ ಅಲ್ಲ; ನಾವು ಭಾವಿಸಿದ್ದಕ್ಕೆ ವಿರುದ್ಧವಾಗಿದೆ, ತೀರ ಅದ್ಭುತವಾಗಿದೆ! ಎಂಥ ಅಸಾಧಾರಣ ಸಂಗತಿಯಿದು – ಹೀಗೆ ನಾವು ಭಾವಿಸಿಕೊಳ್ಳುತ್ತೇವೆ. ನರೇಂದ್ರ ಶ್ರೀರಾಮಕೃಷ್ಣರ ಬಳಿಗೆ ಹೋಗಿ ಭೇಟಿಯಾದಾಗ, ಅವರನ್ನು ಒಬ್ಬ ವಿಚಿತ್ರ ವ್ಯಕ್ತಿಯೆಂದು ಭಾವಿಸಿದ್ದ. ಆದರೆ ಕ್ರಮೇಣ ಅವರ ಅದ್ಭುತ ವ್ಯಕ್ತಿತ್ವ ಅವರನ್ನು ಒಬ್ಬ ಅಸಾಧಾರಣ ದೈವೀಮಾನವ ಎಂದು ಪೂಜಿಸುವಂತೆ ಮಾಡಿತು. ಸ್ವಾಮೀಜಿಯವರ ಜೀವನವೇ ಸಂಪೂರ್ಣವಾಗಿ ಬದಲಾಯಿತು. ಇದೇ ರೀತಿ, ವಿಜ್ಞಾನಿ ನ್ಯೂಟನ್ ತನ್ನ ತಲೆಯ ಮೇಲೆ ಬಿದ್ದ ಸೇಬುಹಣ್ಣಿನಿಂದಾಗಿ, ಇಡೀ ಪ್ರಪಂಚವೇ ಬೆರಗಾಗುವಂತಹ ಗುರುತ್ವಾಕರ್ಷಣ ತತ್ತ್ವವನ್ನು ಕಂಡುಕೊಂಡ. ಇದೆಲ್ಲವೂ ಪ್ರಸಿದ್ಧ ವ್ಯಕ್ತಿಗಳ ವಿಷಯವಾಯಿತು. ಆದರೆ ಸಾಮಾನ್ಯ ಜನರ ಜೀವನದಲ್ಲೂ ಅನೇಕ ಬಾರಿ ಇಂಥ ಸಂಗತಿಗಳು ನಡೆಯುತ್ತವೆ. ಅವರವರ ಪರಿಸರ, ಸಂದರ್ಭ, ಮನೋಭಾವಗಳಿಗೆ ಅನುಗುಣವಾಗಿ ಒಬ್ಬೊಬ್ಬರ ಅನುಭವ ಒಂದೊಂದು ರೀತಿ ಇರಬಹುದು. ಆದರೆ ಈ ರೀತಿ ಹೊಸ ಆಯಾಮವೊಂದನ್ನು ಕಂಡುಕೊಳ್ಳುವ ಹಾಗೂ ಅದರಿಂದ ಒಬ್ಬನ ಜೀವನವೇ ಬದಲಾಗುವ ಈ ಪ್ರಕ್ರಿಯೆ ಅತ್ಯಂತ ಅಸಾಧಾರಣವಾಗಿರುತ್ತದೆ; ಅದು ಒಬ್ಬ ವ್ಯಕ್ತಿಯ ಜೀವನದಲ್ಲೇ ಒಂದು ವಿಸ್ಮಯದ ಕ್ಷಣವಾಗಿರುತ್ತದೆ.

ಆದರೆ ಈ ಬಗೆಯ ಹೊಸ ದಿಕ್ಕು ಕೆಲವರಿಗೆ ಮಾತ್ರವೇ ಗೋಚರಿಸುತ್ತದೆ, ಅದರ ವಿಷಯವಾಗಿ ಚರ್ಚಿಸುವ ಅಗತ್ಯವೇನಿದೆ ? ಎಂದು ನಾವು ನಿರ್ಲಿಪ್ತರಾಗಿರಬೇಕಾಗಿಲ್ಲ. ಆಧ್ಯಾತ್ಮಿಕ ದೃಷ್ಟಿಕೋನವು ಹಲವರ ಬಾಳಿನಲ್ಲಿ ಈ ರೀತಿ ಹೊಸ ಪ್ರಪಂಚವನ್ನೇ ತೆರೆದಿದೆ. ಎಷ್ಟೋ ಮಂದಿ ಸಂತರ ಜೀವನವನ್ನು ನೋಡಿದರೆ, ಆರಂಭದಲ್ಲಿ ಅವರು ನಾಸ್ತಿಕರೋ, ಪರಮ ಭೋಗಿಗಳೋ, ಪ್ರಾಪಂಚಿಕತೆಯಲ್ಲಿ ಮುಳುಗಿದವರೋ ಆಗಿದ್ದುದನ್ನು ಕಾಣುತ್ತೇವೆ. ಯಾವುದೋ ಒಂದು ಘಟನೆ, ಒಂದು ವಿಚಾರ ಅಥವಾ ಯಾರೋ ಮಹಾತ್ಮರ ಸಂಪರ್ಕ ಅವರ ಬದುಕನ್ನು ಬದಲಾಯಿಸಿತು. 'ಹಿಂದೆ ಎಂತಹ ಮೂಢನಾಗಿದ್ದೆ! ಇಷ್ಟೇ ಜೀವನ ಎಂದುಕೊಂಡಿದ್ದೆ. ಅದೊಂದು ಗಳಿಗೆ ಎಲ್ಲವೂ ಬದಲಾಗಿ ಹೋಯಿತಲ್ಲ!' ಎಂದು ಅವರು ಜೀವನಪರ್ಯಂತ ವಿಸ್ಮಯಪಟ್ಟುಕೊಳ್ಳುತ್ತಾರೆ. ಒಂದೊಂದು ಕಾಲದಲ್ಲೂ, ಒಂದೊಂದು ದೇಶದಲ್ಲೂ ಬುದ್ಧನಂಥ, ತುಳಸೀದಾಸರಂಥ, ಸದಾಶಿವ ಬ್ರಹ್ಮೇಂದ್ರರಂಥ, ಪುರಂದರದಾಸರಂಥ ಮಹಾತ್ಮರು ಉದಯಿಸಿದರು. ಹೊಸ ಉದಯವಾಗುವಲ್ಲಿ ತನಕವೂ, ಅವರ ಪಾಲಿಗೆ ಅವರ ಜೀವನ ಕತ್ತಲಲ್ಲಿ ತೊಳಲಾಡಿದಂತೆ. ಹೊಸ ಬಾಗಿಲು ತೆರೆದೊಡನೆ ಎಲ್ಲವೂ ಹೊಸತು, ಎಲ್ಲವೂ ಭವ್ಯ ಹಾಗೂ ದಿವ್ಯ; ಮುಂದಿನ ದಾರಿಯೆಲ್ಲವೂ ಹೊಸ ಬೆಳಕಿನತ್ತ.

## ದಿವ್ಯತೆಯೆಂಬ ಸತ್ಯದ ಅರಿವು

ಅನೇಕ ಮಂದಿ ಸಂತರ ಜೀವನ ಚರಿತ್ರೆಗಳಲ್ಲೂ, ಅವರದೇ ಬರಹಗಳಲ್ಲೂ ವ್ಯಕ್ತವಾಗುವ ಅಂತರಂಗದ ಭಾವನೆಯೊಂದಿದೆ: ಹೊಸದಾಗಿ ಪಡೆದ ಅರಿವು, ಅದರಿಂದ ಬದಲಾದ ಬದುಕು ಅವರಲ್ಲಿ ನಿರಂತರ ಧನ್ಯತೆಯ ಭಾವವನ್ನು ಉಕ್ಕಿಸುತ್ತಲೇ ಇರುತ್ತದೆ. ಈ ನಿರಂತರ ಭಾವದ ಪ್ರವಾಹಕ್ಕೆ ಆ ಹೊಸ ಅರಿವಿನ ಅಗಾಧತೆಯೇ ಕಾರಣ. ಅಲ್ಲಿಯ ತನಕ ಎಲ್ಲವೂ ಅಲ್ಪವಾಗಿತ್ತು, ಸೀಮಿತವಾಗಿತ್ತು, ಕೇವಲ ಲೌಕಿಕವಾಗಿತ್ತು. ಹೊಸ ಪ್ರಪಂಚ ತೆರೆದೊಡನೆ – ಅದು ಅನಂತದತ್ತ ಹೊರಟ ಒಂದು ಅದ್ಭುತ ಪ್ರಯಾಣವಾಗಿ ಮಾರ್ಪಟ್ಟಿತು. ಪ್ರತಿ ಕ್ಷಣವೂ ದಿವ್ಯತೆಯನ್ನು ಸಂಧಿಸುವ ಕ್ಷಣ ಅವರದಾಯಿತು. ಈ ಬಗೆಯ ಭಾವನೆ, ಅನುಭವ, ಬದಲಾವಣೆ ಎಲ್ಲರಿಗೂ ಸಂಭವಿಸಬಹುದೆ? ಎಲ್ಲರೂ ದಿವ್ಯತೆಯ ಹೊಸ ಅರಿವನ್ನು ಹೊಂದಬಹುದೆ?

ಉತ್ತರ ಸ್ಪಷ್ಟವಾಗಿಯೇ ಇದೆ : ಎಲ್ಲರಿಗೂ ಇದು ಸಾಧ್ಯವಿದೆ. 'ಭಗವಂತನ ದಿವ್ಯಧಾಮಕ್ಕೆ ಎಲ್ಲರೂ ಹಕ್ಕುದಾರರು. ಮಾನವರೆಲ್ಲರೂ ಅದನ್ನು ಪಡೆಯಬಹುದು' – ಎನ್ನುತ್ತಾರೆ

ಸ್ವಾಮಿ ವಿವೇಕಾನಂದರು. ಧರ್ಮ, ಅಧ್ಯಾತ್ಮ, ಭಗವಂತ ಎಲ್ಲರಿಗೂ ಸೇರಿದ ಸತ್ಯ; ಅದನ್ನು ಎಲ್ಲರೂ ಪಡೆಯಬಹುದು ಎಂಬುದೇ ನವಯುಗದ ಅವತಾರಪುರುಷರಾದ ಶ್ರೀರಾಮಕೃಷ್ಣರ ಸಂದೇಶ. ಅಷ್ಟೇ ಅಲ್ಲ; ಭಗವಂತನ ಸಾಕ್ಷಾತ್ಕಾರಕ್ಕಾಗಿ ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಮಾನವ ಜೀವನದ ಗುರಿಯೇ ಭಗವಂತನ ಸಾಕ್ಷಾತ್ಕಾರ ಎಂದು ಅವರು ಸಾರಿದರು. ಜಾತಿ, ಕುಲ, ಪಂಗಡ, ವಯೋಮಿತಿ, ವಿದ್ಯಾಭ್ಯಾಸ ಇತ್ಯಾದಿಗಳ ತಾರತಮ್ಯವಿಲ್ಲದೆ ಪ್ರತಿಯೊಬ್ಬರೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು – ಇದು ಈ ಯುಗದ ಆಧ್ಯಾತ್ಮಿಕ ದೃಷ್ಟಿಕೋನ.

ಒಬ್ಬ ವ್ಯಕ್ತಿ ಯಾವ ಕ್ಷೇತ್ರದಲ್ಲೇ ಇರಲಿ, ಯಾವ ಉದ್ಯೋಗ–ವ್ಯವಹಾರಗಳನ್ನೇ ಹೊಂದಿರಲಿ, ಹೆಂಗಸು–ಗಂಡಸು, ವೃದ್ಧ–ಬಾಲಕ–ಯಾರೇ ಆಗಿರಲಿ, ಈ ಬಗೆಯ ಆಧ್ಯಾತ್ಮಿಕ ಭಾವನೆಯನ್ನು ಹೊಂದಬಹುದು. ಒಬ್ಬ ವ್ಯಕ್ತಿಯ ಜೀವನದಲ್ಲಿ ನಿಜವಾದ ಶ್ರದ್ಧೆ ಯಾವಾಗ ಬಂದೊದಗುವುದು ಎಂದು ಹೇಳುವುದು ಸಾಧ್ಯವಿಲ್ಲ. 'ನಿಜವಾದ ಶ್ರದ್ಧೆ' ಎಂದರೆ, ಭಗವಂತನ ಅಥವಾ ಅಂತಿಮ ಸತ್ಯವೊಂದರ ವಿಷಯವಾಗಿ ನಂಬಿಕೆ ಹುಟ್ಟುವುದು. ಅನೇಕರಿಗೆ ದೇವರಲ್ಲಿ ನಂಬಿಕೆಯಿದೆ – ಕಾರಣಗಳು ಅನೇಕ: ದೈವೀ ಭಕ್ತ ಕುಟುಂಬದಿಂದ ಬಂದಿರುವುದು, ಹೆತ್ತವರ ಪ್ರಭಾವ, ಪರಿಸರದ ಪ್ರಭಾವ, ಓದು–ಚರ್ಚೆ ಇತ್ಯಾದಿಗಳಿಂದ ಉಂಟಾದ ಪ್ರಭಾವ – ಹೀಗೆ. ಇದರಿಂದಾಗಿ ಅವರು ದೇವರನ್ನು ನಂಬಬಹುದು; ದೇವಸ್ಥಾನ, ಉತ್ಸವ, ಪೂಜೆ ಇತ್ಯಾದಿ ಆಚರಣೆ, ಹಬ್ಬ ಹರಿದಿನ – ಇವುಗಳನ್ನೆಲ್ಲ ಮಾಡಬಹುದು. ಆದರೆ ಇಷ್ಟರಿಂದಲೇ ಅದನ್ನು 'ನಿಜವಾದ ಶ್ರದ್ಧೆ' ಎನ್ನಲಾಗದು. ಜೀವನದ ದಿಕ್ಕನ್ನೇ ಬಲಾಯಿಸುವ, ಹೊಸ ಆಯಾಮವನ್ನೇ ತೋರಿಸಿಕೊಡುವ, ಹೊಸ ಪ್ರಪಂಚವನ್ನೇ ತೆರೆಯುವ ದೃಷ್ಟಿಕೋನ ಇದಕ್ಕಿಂತ ಬೇರೆ ರೀತಿಯದು. ಅದು ಬಂದಾಗ ವ್ಯಕ್ತಿ ಬದಲಾಗುತ್ತಾನೆ, ಅವನ ಬದುಕು ಬದಲಾಗುತ್ತದೆ. ಅವನ ನಂಬಿಕೆ, ಶ್ರದ್ಧೆ, ಅರಿವು ಗಾಢವಾಗುತ್ತದೆ. ಇದೇ 'ನಿಜವಾದ ಶ್ರದ್ಧೆ' ಎನ್ನಬೇಕು. ಯಾವ ಬಗೆಯದು ಈ ಶ್ರದ್ಧೆ, ಹೊಸ ಅರಿವು?

### ಹೊಸ ಅರಿವಿನ ಅಲೌಕಿಕತೆ

ಭಗವಂತನ ಅಸ್ತಿತ್ವವೆಂಬುದು ನಿಜವಾಗಿಯೂ ಒಂದು ವಾಸ್ತವವೆಂಬ ಭಾವನೆ ನಮ್ಮ ಅಂತರಂಗದಲ್ಲಿ ಮೂಡುವ ಕ್ಷಣ ಯಾವ ಸಂದರ್ಭದಲ್ಲಾದರೂ ಬರಬಹುದು. ಆದರೆ ಅದು ಉಂಟುಮಾಡುವ ಬದಲಾವಣೆ ಮಾತ್ರ ಅಗಾಧವಾದುದು. ಹಲವು ಬಾರಿ ನಾವು ಆಡುವ ಮಾತುಗಳು ನಿಜವಲ್ಲದೆ ಇರಬಹುದು, ಓದುವ ವಿಷಯಗಳು ನಿಜವಲ್ಲದೆ ಇರಬಹುದು. ಆದರೆ ನಮ್ಮಲ್ಲೇ ನಾವು ಅಂದುಕೊಳ್ಳುವ ಮಾತುಗಳು ನಿಜವಾಗಿರುತ್ತವೆ. ನಮಗೆ ನಾವು ಸುಳ್ಳು ಹೇಳಲಾರೆವು. '— ಇಲ್ಲ, ಇದು ನಿಜವಲ್ಲ. ಸತ್ಯ ಬೇರೆಯೇ ಇದೆ. ಅದಕ್ಕೆ ಬದ್ಧನಾಗಿರು' ಎಂದು ನಮ್ಮಲ್ಲೇ ನಾವು ಹೇಳಿಕೊಳ್ಳುತ್ತೇವೆ. ಈ ಒಳ ಮನಸ್ಸಿಗೆ, ಅಥವಾ ನಮ್ಮ ಅಂತರಂಗಕ್ಕೆ ಭಗವಂತನ ದಿವ್ಯ ಅಸ್ತಿತ್ವ ಅರ್ಥವಾಗಬೇಕು. ಅದನ್ನು ಒಪ್ಪಿಕೊಂಡು, ಅದರ ಅನಂತ ಸಾಧ್ಯತೆಗಳಿಗೆ ನಮ್ಮನ್ನು ಒಡ್ಡಿಕೊಳ್ಳಬೇಕು. ಆಗ ಹೊಸ ದಿಕ್ಕಿನ ಯಾನ ಆರಂಭವಾಗುವುದು.

ಈ ಪ್ರಪಂಚದ ಪ್ರತಿಯೊಂದೂ ಸೀಮಿತ; ನಾವು 'ಅಸಂಖ್ಯಾತ'ವೆಂದು ಹೇಳುವ ಕಣ–ಕಣಗಳು, ಗ್ರಹ–ನಕ್ಷತ್ರ–ಆಕಾಶಕಾಯಗಳೆಲ್ಲವೂ ಸೀಮಿತ. ಸೀಮಿತವೇಕೆ? – ಅವು ನಿರಂತರ ಬದಲಾವಣೆಗೆ ಒಳಗಾಗುತ್ತವೆ, ಸೃಷ್ಟಿ–ಸ್ಥಿತಿ–ಲಯಗಳೆಂಬ ಅವಸ್ಥೆಗಳಿಗೆ ಬದ್ಧವಾಗಿರುತ್ತವೆ. ಈ ಅರ್ಥದಲ್ಲಿ ಪ್ರತಿಯೊಂದೂ ಕಾಲಬದ್ಧ, ದೇಶಬದ್ಧ. ಕಾರ್ಯಕಾರಣ ನಿಯಮಕ್ಕೆ ಒಳಗಾಗಿವೆ. ಭಗವಂತನ ನೆಲೆ ಇದರಾಚೆಗೆ. ಈ ವ್ಯಕ್ತವಾಗಿರುವ ಪ್ರಪಂಚದ ಮಿತಿಗಳಾವುವೂ ಭಗವಂತನನ್ನು ಬಾಧಿಸುವುದಿಲ್ಲ. ವೇದ–ವೇದಾಂತಗಳಲ್ಲಿ ಭಗವಂತನ್ನು ಆತ್ಮ, ಬ್ರಹ್ಮ ಎಂದು ಕರೆಯಲಾಗಿದೆ; ಅವನ ಒಂದು ಸ್ವರೂಪವೇ 'ಅನಂತ'. ಮಾನವ ಮನಸ್ಸಿನ ಊಹೆಗೂ ನಿಲುಕದ, ಎಲ್ಲವನ್ನೂ ಮೀರಿದ, ಒಂದು ಅಸಾಧಾರಣ ಲಕ್ಷಣವೇ ಅದು. ಭಗವಂತನಿಗೆ ಸಂಬಂಧಿಸಿದ್ದೆಲ್ಲವೂ ಭವ್ಯ, ದಿವ್ಯ, ಅಸಾಧಾರಣ. ಈ ಭಾವನೆಗಳಲ್ಲಿ ಮನಸ್ಸು ಎಷ್ಟು ಕಾಲ ವಿರಮಿಸುವುದೋ – ಆ ಮನಸ್ಸಿಗೂ ಆ ದಿವ್ಯ ಗುಣಗಳ ಸ್ಪರ್ಶವಾಗುವುದು. ಈ ಲೋಕದಾಚೆಯ, ಸಾಮಾನ್ಯ ಮನಸ್ಸಿನ ಅರಿವಿಗೆ ನಿಲುಕದ ಆ ದಿವ್ಯಲೋಕದ ಒಂದು ಸಣ್ಣ ಸ್ಪರ್ಶವೇ ನಮ್ಮನ್ನು ಕ್ಷಣಕಾಲ ಸ್ತಂಭೀಭೂತರನ್ನಾಗಿಸುವುದು. ಮತ್ತೆ ಮತ್ತೆ ಅದೇ ಸ್ಪರ್ಶಕ್ಕಾಗಿ ಹಂಬಲಿಸುವುದು. ಎಲ್ಲ ಶಕ್ತಿ, ಸತ್ಯ, ಆನಂದಗಳ ಘನೀಭೂತ ಪುಂಜವೇ ಆ ದಿವ್ಯತೆ ಎನ್ನಲಾಗಿದೆ. ಅದರ ಗಾಢ ಅನುಭವವನ್ನೇ ಸಾಕ್ಷಾತ್ಕಾರ ಎನ್ನುತ್ತಾರೆ. ಅದನ್ನು ಹೊಂದುವವರೆಗೂ – ಮನುಷ್ಯ ವಿರಮಿಸಲಾರ. 'ಹೊಸ ಅರಿವು' ತಂದುಕೊಡುವ ಬದಲಾವಣೆಯೇ ಇದು.

### ಸಾಧನೆಯ ಹಾದಿ

ಒಂದು ಬಾರಿ ಆಧ್ಯಾತ್ಮಿಕ ಪ್ರಪಂಚದ ಅರಿವು ಮೂಡಿದ ವ್ಯಕ್ತಿಯು ಅದರ ಅನಂತ ಸಾಧ್ಯತೆಗಳತ್ತ ಗಮನ ಹರಿಸುತ್ತಾನೆ. ಒಂದೊಂದು ಪಂಥದಲ್ಲೂ ಆಧ್ಯಾತ್ಮಿಕ ಅನುಭವವನ್ನು ಒಂದೊಂದು ರೀತಿ ವರ್ಣಿಸಲಾಗಿದೆ. ಸಾಮಾನ್ಯವಾಗಿ ಎಲ್ಲ ಆಧ್ಯಾತ್ಮಿಕ ಪಂಥಗಳಲ್ಲೂ ಭಗವಂತ ಕೃಪೆ ಎನ್ನುವುದು ಇದ್ದೇ ಇದೆ. ಹೇಗಾದರೂ 'ಅವನ' ಕೃಪೆಯಾಗಿಬಿಟ್ಟರೆ ಮುಗಿಯಿತು, ಮುಂದೆ ಅವನೇ ಕೈಹಿಡಿದು ನಡೆಸುತ್ತಾನೆ ಎನ್ನುತ್ತಾರೆ. ಆದರೆ ಈ ಕೃಪೆ ಉಂಟಾಗುವುದು ಹೇಗೆ? ಅದಕ್ಕಾಗಿ ಅವನನ್ನು ಪೂಜಿಸು, ಪ್ರಾರ್ಥಿಸು, ಭಗವಂತನ ಸೇವೆ ಮಾಡು – ಇತ್ಯಾದಿಯಾಗಿ ಭಕ್ತಿ ಪಂಥದ ವಿಧಾನಗಳು ಅನೇಕ ಬಗೆಯಲ್ಲಿವೆ. 'ಕೃಪೆ' ಎಂಬು

ದನ್ನು ಹತ್ತಾರು ಬಗೆಯಲ್ಲಿ ಅರ್ಥೈಸಲಾಗಿದೆ, ವಿವರಿಸಲಾಗಿದೆ. 'ನಾವು ಬಯಸಿದ್ದನ್ನು ನೀಡುತ್ತಾನೆ, ಕೇಳಿದ್ದನ್ನು ದಯಪಾಲಿಸುತ್ತಾನೆ'– ಇದು ತೀರ ಕೆಳಹಂತದ ವಿವರಣೆ. 'ಅವನ ಕೃಪೆಯಾದರೆ ಬೇರೇನೂ ಬೇಕಾಗುವುದಿಲ್ಲ' – ಇದು ಒಂದು ಹೆಜ್ಜೆ ಮುಂದಿನದು. 'ನಿಜವಾದ ಕೃಪೆ ಎಂದರೆ, ಭಗವಂತನ ದರ್ಶನ. ಅವನನ್ನು ಕಂಡರೆ ಇನ್ನೇನು ತಾನೇ ಬೇಕು?' ಇದು ಭಾರತದಲ್ಲಿ ಭಕ್ತರೆಲ್ಲರಿಗೆ ನೀಡಲಾದ ಭರವಸೆ. ಈ ರೀತಿ 'ಕೃಪೆ' ಎಂಬುದು ನಾವು ಬಯಸಿದ ವಸ್ತುವನ್ನು ಪಡೆಯುವುದರಿಂದ ಹಿಡಿದು, ಭಗವಂತನ ದರ್ಶನದವರೆಗೂ ವ್ಯಾಪಿಸಿದ ಒಂದು ಭಾವನೆಯಾಗಿದೆ. ಇದರ ವ್ಯಾಪಕತೆ ಎಷ್ಟೊಂದು ಅಗಾಧವಾದದ್ದು ಎಂಬುದೇ ಇಲ್ಲಿ ಆಶ್ಚರ್ಯಕರವಾದ ಸಂಗತಿ.

'ಮುಕ್ತಿ', 'ಸಾಕ್ಷಾತ್ಕಾರ, 'ಕೈವಲ್ಯ', 'ನಿರ್ವಾಣ' – ಇಂತಹ ಪದಗಳ ಮೂಲಕ ಆಧ್ಯಾತ್ಮಿಕ ಅನುಭವಗಳನ್ನು ಇನ್ನಿತರ ಪಂಥಗಳಲ್ಲಿ ವಿವರಿಸಲಾಗಿದೆ. ಇಂಥ ಅನುಭವಗಳಿಂದ ಏನಾಗುತ್ತದೆ? ಭಗವಂತನ ಅಥವಾ ಆತ್ಮನ ಅರಿವು ಕೇವಲ ಮಾನಸಿಕ, ಬೌದ್ಧಿಕ ಅರಿವಾಗಿರದೆ, ಸಾಕ್ಷಾತ್ಕಾರದ ಅನುಭವವಾಗುತ್ತದೆ. ಅದನ್ನು ಪಡೆದ ನಂತರ, ವ್ಯಕ್ತಿಯು ಆ ಅನುಭವದಲ್ಲಿ ಒಂದಾಗುತ್ತಾನೆ. ವ್ಯಕ್ತಿಗೂ ಭಗವಂತನಿಗೂ ಯಾವುದೇ ಭೇದವಿರುವುದಿಲ್ಲ. ಇದು ಕೇವಲ ಕಾಲ್ಪನಿಕವೋ, ಉತ್ಪ್ರೇಕ್ಷೆಯ ಮಾತೋ ಆಗಿರದೆ, ವಾಸ್ತವ ಅನುಭವವಾಗಿರುತ್ತದೆ. ವೇದಾಂತವು ತಿಳಿಸಿಕೊಡುವ ಸಾಕ್ಷಾತ್ಕಾರದ ಅನುಭವ ಈ ಬಗೆಯದು. ಹೀಗೆ, 'ಹೊಸ ಅರಿವಿ'ನಿಂದ ಆರಂಭಗೊಂಡ ಆಧ್ಯಾತ್ಮಿಕ ಯಾನವು ಸಾಕ್ಷಾತ್ಕಾರದಲ್ಲಿ ಕೊನೆಗೊಳ್ಳುವುದು.

### ಪ್ರಪಂಚ ವ್ಯವಹಾರಗಳ ನಡುವೆ

ಎಲ್ಲರಿಗೂ ಮತ್ತೆ ಮತ್ತೆ ಮೂಡಿ ಮರೆಯಾಗುವ ಪ್ರಶ್ನೆಯೊಂದಿದೆ: ಅಧ್ಯಾತ್ಮ, ದೇವರು, ಆತ್ಮ, ಬ್ರಹ್ಮ ಎಂದೆಲ್ಲ ಕೇಳುತ್ತೇವೆ. ಆದರೆ ವ್ಯಾವಹಾರಿಕ ಜಗತ್ತಿನಲ್ಲಿ ನಿರತರಾಗಿರುವ ನಮಗೆ ಅದೆಲ್ಲ ಎಷ್ಟರ ಮಟ್ಟಿಗೆ ಲಭಿಸುವುದು? ದಿನ ಬೆಳಾಗದರೆ ಸಾಂಸಾರಿಕ ಜಂಜಾಟದಲ್ಲಿ ಮಗ್ನರಾಗಿರುವ ನಮಗೆ, ಹತ್ತು ಹಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲೇ ದಿನವೆಲ್ಲ ಕಳೆದು ಹೋಗುತ್ತದೆ. ಇದರ ನಡುವೆ ಆಧ್ಯಾತ್ಮಿಕ ಸಾಧನೆ ಹೇಗೆ ಸಾಧ್ಯ ?

ಈ ಪ್ರಶ್ನೆ ಇಂದು, ನಿನ್ನೆಯದಲ್ಲ. ಬಹಳ ಪ್ರಾಚೀನ ಕಾಲದಲ್ಲೂ ಹಲವು ಮಂದಿ ಜನನಿಬಿಡ ನಗರಗಳಲ್ಲಿ ಇದ್ದುಕೊಂಡೂ, ಅತ್ಯಂತ ಚಟುವಟಿಕೆಗಳಲ್ಲಿ ಮುಳುಗಿಕೊಂಡೂ ಸಾಧನೆ ಮಾಡಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡಿದ್ದರು. ಇದಕ್ಕೆ ಅತ್ಯುತ್ತಮ ಉದಾಹರಣೆ ಜನಕ ಮಹಾರಾಜನದು. ಅದೇ ರೀತಿ, ಭಗವದ್ಗೀತೆಯ ಬೋಧನೆಯಾದದ್ದು ವೀರ ಯೋಧ ಅರ್ಜುನನಿಗೆ – ಅದೂ ರಣರಂಗದಲ್ಲಿ. ಭೀಕರ ಯುದ್ಧದ ಸನ್ನಿವೇಶದಲ್ಲೇ ಪರಮ ಶಾಂತಿಯ ಗೀತೆ ಹರಿದುಬಂದುದು ಎಂಥ ಒಂದು ಅದ್ಭುತ ಘಟನೆ! ಸ್ವಾಮಿ ವಿವೇಕಾನಂದರು ಅಭಿಪ್ರಾಯ ಪಡುತ್ತಾರೆ – ಆರಂಭದಲ್ಲಿ ಕ್ಷತ್ರಿಯರು ಮಾತ್ರವೇ ಬ್ರಹ್ಮಜ್ಞಾನವನ್ನು ಹೊಂದಿದ್ದರು; ಬಳಿಕ ಬ್ರಾಹ್ಮಣರು ಅವರಿಂದ ಅದನ್ನು ಕಲಿತರು. ಅಷ್ಟೊಂದು ರಾಜಕಾರಣದ, ಎಲ್ಲ ಗೊಂದಲ–ಗದ್ದಲಗಳ ನಡುವೆಯೂ ಅವರಿಗೆ ಬ್ರಹ್ಮಸಾಕ್ಷಾತ್ಕಾರದ ಸಾಧನೆ ಹೇಗೆ ಸಾಧ್ಯವಾಯಿತು?

ಎಲ್ಲ ಕಾಲದಲ್ಲೂ ಮಾನವನ ಮನಃಸ್ಥಿತಿ ಒಂದೇ ರೀತಿ ಇರುತ್ತದೆ. ಅತ್ಯಾಧುನಿಕ ಕಾಲದಲ್ಲೂ ಪ್ರಾಚೀನ ಋಷಿಮುನಿಗಳ ಪ್ರಶಾಂತ ಧ್ಯಾನಮಯ ಜೀವನ ಸಾಧ್ಯವಿದೆ. ಅದೇ ರೀತಿ, ಇತಿಹಾಸ ಕಂಡರಿಯದಷ್ಟು ಪ್ರಾಚೀನ ಕಾಲದಲ್ಲೂ ಮಾನವನ ಮನಸ್ಸು ಇನ್ನಿಲ್ಲದಷ್ಟು ಕ್ಷೋಭೆಗೆ ಒಳಗಾಗಿರುವುದೂ ಅಷ್ಟೇ ಸತ್ಯ. ಮುಖ್ಯವಾದ ಸಂಗತಿಯಿದು: ಯಾವಾಗ ಮಾನವನು ತನ್ನ ಮನಸ್ಸನ್ನು ನಿಯಂತ್ರಿಸಿ, ಅದನ್ನು ಧ್ಯೇಯವಸ್ತುವಿನೆಡೆಗೆ ಹರಿಯಬಿಟ್ಟು ಉಳಿದೆಲ್ಲವನ್ನೂ ಮರೆಯುತ್ತಾನೋ, ಆಗ ಅಸಾಧಾರಣ ಸತ್ಯದರ್ಶನವಾಗುವುದು. ಬಾಹ್ಯಪ್ರಪಂಚದ ಗದ್ದಲಗಳಿಂದ ವಿಚಲಿತನಾಗದೆ ಈ ರೀತಿಯ ಒಂದು ಮನಃಸ್ಥಿತಿಯನ್ನು ಸಂಪಾದಿಸುವುದು ಮೊದಲ ಹಂತ. ನಿರಂತರ ಏಕಾಗ್ರತೆಯಿಂದ ಕಾಲ–ದೇಶಗಳನ್ನು ಮರೆತು ಮುಂದುವರಿಯುವುದೇ ಮುಂದಿನ ಹಂತ. ಆಧ್ಯಾತ್ಮಿಕ ಅನುಭವ ಕೊನೆಯ ಹಂತ. ಇದನ್ನು ಎಲ್ಲ ಕಾಲದಲ್ಲೂ, ಎಲ್ಲ ಅವಸ್ಥೆಗಳಲ್ಲೂ ಹೊಂದುವುದು ಸಾಧ್ಯವಿದೆ. ಪ್ರಾಚೀನ ಶಾಸ್ತ್ರಪರಂಪರೆ ಹಾಗೂ ಆಧ್ಯಾತ್ಮಿಕ ಸಂತರ ಪರಂಪರೆ ಈ ಸತ್ಯವನ್ನು ಸಾರಿ ಹೇಳುತ್ತದೆ.

ಜನಸಾಮಾನ್ಯರಿಗೆಲ್ಲ ಅಧ್ಯಾತ್ಮ ರುಚಿಸುವುದಿಲ್ಲ ; ಅವರಿಗೆ ಅವರದೇ ಆದ ಬದುಕಿದೆ, ಆದ್ದರಿಂದ ಎಲ್ಲರಿಗೂ ಧರ್ಮವನ್ನು ಹೇರಬೇಡಿ ಎಂದು ಹೇಳುವವರಿದ್ದಾರೆ. ನಮ್ಮ ದೇಶದಲ್ಲಿ ಧರ್ಮ, ಅಧ್ಯಾತ್ಮವೆಂದರೆ ಅದು ಹೇರುವ ವಸ್ತುವಲ್ಲ. ಜೀವನದಿಂದ ಬೇರ್ಪಡಿಸಲಾಗದಷ್ಟು ಅದು ಹಾಸುಹೊಕ್ಕಾಗಿದೆ. ಧರ್ಮವು ತಂದಿಡುವ ಅನಾಹುತಗಳನ್ನು ಎತ್ತಿ ತೋರಿಸುವ ಭರದಲ್ಲಿ, ಅದು ಜೀವನಕ್ಕೆ ನೀಡಿರುವ ಅತ್ಯುನ್ನತ ಆದರ್ಶ, ಭರವಸೆ, ಸಂಸ್ಕೃತಿ, ತಾತ್ತ್ವಿಕ ಉನ್ನತಿ, ಮೂಲಭೂತ ಸಮಸ್ಯೆಗಳಿಗೆ ನೀಡುವ ಪರಿಹಾರ – ಇವನ್ನು ನಾವು ಮರೆಯುತ್ತೇವೆ. ಜೀವನವನ್ನು ಉನ್ನತ ಆಯಾಮದತ್ತ ಕೊಂಡೊಯ್ಯುವ ಆಧ್ಯಾತ್ಮಿಕ ಅರಿವು ನಮಗೆ ಬಂದಾಗಲೇ ನಾವು ಅದರ ಮಹತ್ವವನ್ನು ಅರಿಯುತ್ತೇವೆ. ❁

**ಏಪ್ರಿಲ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೬ | ಭಾನುವಾರ | ಶ್ರೀ ರಾಮನವಮಿ |
| ೮ | ಮಂಗಳವಾರ | ಏಕಾದಶಿ |
| ೨೪ | ಗುರುವಾರ | ಏಕಾದಶಿ |
| ೩೦ | ಬುಧವಾರ | ಶ್ರೀ ಬಸವ ಜಯಂತಿ |